CW-01
PW-01

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ./ಎಸ್.ಟಿ.) ಸಂಖ್ಯೆ 04/2022

ದಿ. 24-06-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-01
ಫ್ರಾಸಾ-01

**ಪಾಟೀ ಸವಾಲು ಶ್ರೀ ಜೆ.ಸಿ.ಪಿ. ವಕೀಲರಿಂದ ಆರೋಪಿ ಪರವಾಗಿಃ**

19. ನಾನು ಶಾಲೆಗೆ ಹೋಗಿರುವುದಿಲ್ಲ. ಶರಣಬಸವ ನಾಯಕ ನನ್ನ ಸಂಬಂಧಿಕ ಎನ್ನುವುದು ಸರಿ. ಆತನಿಗೂ ಮತ್ತು ಆರೋಪಿಗೂ ರಾಜಕೀಯ ವೈಮನಸ್ಸು ಇತ್ತು ಎನ್ನುವುದು ಸರಿ. ಸದರಿ ಶರಣಬಸವ ನಾಯಕರವರು ಕಾಂಗ್ರೆಸ್ ಪಕ್ಷದ ನಾಯಕ ಎನ್ನುವುದು ಸರಿ. ಆರೋಪಿ ಬಿಜೆಪಿ ಪಕ್ಷದವರು ಎನ್ನುವುದು ಸರಿ. ನಿಪಿ-1 ರ ದೂರನ್ನು ನಾನು ಶರಣಬಸವ ನಾಯಕರವರ ಹೇಳಿಕೆಯಂತೆ ನೀಡಿದ್ದೇನೆ ಎನ್ನುವುದು ಸರಿ. ಸದರಿ ದೂರನ್ನು ನೀಡಲು ಕಾರಣ ಮತ್ತು ಅದರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ದೂರನ್ನು ಶರಣಬಸವ ನಾಯಕರವರು ಹೇಳಿ ಬರೆಸಿದ್ದಾರೆಂದರೆ ಸರಿ. ನಾನು ಮುಖ್ಯ ವಿಚಾರಣೆಯನ್ನು ನೀಡುವ ಸಮಯದಲ್ಲಿ ಸದರಿ

CW-01
PW-01

ಶರಣಬಸವ ನಾಯಕ ನ್ಯಾಯಾಲಯಕ್ಕೆ ಬಂದಿದ್ದರು ಮತ್ತು ಅವರ ಒತ್ತಾಯದಿಂದ ಸಾಕ್ಷ್ಯನುಡಿದಿದ್ದೇನೆಂದರೆ ಸರಿ.

ಮರುವಿಚಾರಣೆ ವಿಶೇಷ ಸರಿಕಾರಿ ಅಭಿಯೋಜಕರಿಂದ

20. ದಿಃ 18-09-2025 ರ ನನ್ನ ಮುಖ್ಯ ವಿಚರಣೆಯಲ್ಲಿ ಹೇಳಿದ ವಿಷಯಗಳೆಲ್ಲವೂ ಸತ್ಯವಾಗಿದ್ದರೂ ಸಹ ನಾನು ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.